ನಾಲ್ಕನೇ ದರ್ಜೆ ನೌಕರರಿಗೆ. ಹಿರಿಯ ಚಾಲಕ :

ಹಿರಿಯ ಚಾಲಕ : ರೂ. ೧೧೯೦-೩೦-೧೪೦೦-೪೦-೧೮೦೦-೫೦-೨೨೦೦.

ಚಾಲಕ : ರೂ. ೯೬೦-೨೦-೧೧೦೦-೩೦-೧೪೦೦-೪೦-೧೮೬೦.

ಅಟೆಂಡರ್ ; ೮೧೦-೧೫-೯೦೦-೨೦-೧೧೦೦-೩೦-೧೩೧೦.

ಸೇವಕ : ೭೮೦-೧೫-೯೦೦-೨೦-೧೦೪೦.

ಈ ಮೇಲಿನ ಶ್ರೇಣಿಯಲ್ಲಿ ನಿಗದಿಪಡಿಸಿದ ಮೂಲ ವೇತನದ ಮೇಲೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶದಂತೆ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ಮತ್ತು ಮಧ್ಯಂತರ ಪರಿಹಾರ ಇತ್ಯಾದಿಗಳನ್ನು ಕೊಡಲಾಗುವುದು.

ಉ) ವ್ಯತ್ಯಾಸವಿಲ್ಲ.

ಊ) ಭಾರತ ಆಹಾರ ನಿಗಮದ ಗೋದಾಮುಗಳಿಂದ ಕೇವಲಬಳ್ಳಿ ಗುಣಮಟ್ಟದ ಆಹಾರಧಾನ್ಯಗಳನ್ನು ಮಾತ್ರ ಎತ್ತುವಳಿ ಮಾಡಲಾಗುತ್ತಿದೆ. ಇದಕ್ಕಾಗಿ ಗುಣಮಟ್ಟ ಪರೀಕ್ಷಕರನ್ನು ನೇಮಿಸಿದ್ದು ಸಂಬಂಧಪಟ್ಟ ಅಧಿಕಾರಿಗಳು ಸಹ ಉಗ್ರಾಣಗಳಿಗೆ ಭೇಟಿ ನೀಡಿ ಉತ್ತಮ ದರ್ಜೆಯ ಧಾನ್ಯವನ್ನು ಎತ್ತುವಳಿ ಮಾಡುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುತ್ತಿರುತ್ತಾರೆ.

ಋ) ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ಮಾಡುವಾಗ ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ ೧೯೭೨ ರಲ್ಲಿಯ ನಿಯಮಗಳನ್ನು ಪಾಲಿಸಲಾಗುವುದು.

ಋೂ) ಇಲ್ಲ.

ವಿವಿಧ ಇಲಾಖೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆ ಭರ್ತಿ ವಿಚಾರ

೪೩೫ (೮೨೧) ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:—

ಅ) ೧೯೯೩-೯೪ನೇ ಜನವರಿ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬ್ಯಾಕ್‌ಲಾಗ್ ಹುದ್ದೆಗಳನ್ನು ಹಾಗೂ ಅನ್ಯಾಯ ನಡೆದಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಸರ್ಕಾರಿ ಸೇವೆಯಲ್ಲಿರುವವರಿಗೆ ಒಂದು ತಿಂಗಳಲ್ಲಿ ಮಾನಿಟರಿಂಗ್ ಸೆಟ್ ಮಾಡಿ ಸರಿಪಡಿಸುತ್ತೇವೆಂದು ಸಭೆಗೆ ಆಶ್ವಾಸನೆ ಕೊಟ್ಟಿರುವರೆ ?

ಆ) ಆ ಮೇರೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಜನರನ್ನು ಭರ್ತಿ ಮಾಡಲಾಗಿದೆ ?

ಇ) ಕೆಲವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಧಿಕಾರಿಗಳಿಗೆ ಆಗಿರುವ ಅನ್ಯಾಯ ಸರಿಪಡಿಸಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು).—

ಅ) ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದವರ ಬ್ಯಾಕ್‌ಲಾಗನ್ನು ದಿನಾಂಕ ೩೧-೩-೧೯೯೪ರ ಮೇಳೆಗೆ ಭರ್ತಿ ಮಾಡಿ ಸರಿದೂಗಿಸಲು ಸರ್ಕಾರ ಈಗಾಗಲೇ ದಿನಾಂಕ ೨೨-೧೧-೧೯೯೩ ರಂದು ಆದೇಶ ಹೊರಡಿಸಿದೆ.

ಅ) ಇಲಾಖಾವಾರು ಮಾಹಿತಿ ಲಭ್ಯವಿಲ್ಲ. ಆದರೆ,

ಪ್ರಥಮ ದರ್ಜೆ ಸಹಾಯಕರು	೯೩
ದ್ವಿತೀಯ ದರ್ಜೆ — , , —	೧೪೭
ಶೀಘ್ರಲಿಪಿಗಾರರು	೯೨
ಬೆರಳಚ್ಚುಗಾರರು	೧೮೦
ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್	೧೩
ಒಟ್ಟು	೫೨೫

ಜನರನ್ನು ನೇಮಕ ಮಾಡಲಾಗಿದೆ.

ಇ) ನಿರ್ದಿಷ್ಟ ಪ್ರಕರಣಗಳನ್ನು ಸೂಚಿಸಿದಲ್ಲಿ ಪರಿಶೀಲಿಸಲಾಗುವುದು.

ಪರಿಸರ ಇಲಾಖೆಯ ನಿಯಮಗಳ ಜಾರಿ

೪೩೬ (೭೮೭) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ವಿಜ್ಞಾನ, ಯಂತ್ರಕಲೆ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸನ್ ೧೯೮೨–೯೩ ಹಾಗೂ ೧೯೯೩–೯೪ನೇ ಸಾಲಿನಲ್ಲಿ ಪರಿಸರ ಇಲಾಖೆಯ ನಿಯಮಗಳನ್ನು ಉಲ್ಲಂಘಿಸಿದವರ ಬಗ್ಗೆ ಕ್ರಮ ಕೈಗೊಂಡಿರುವರೆ ?

ಆ) ಅವರಲ್ಲಿ ಎಷ್ಟು ಖಾಸಗಿ ಸಂಸ್ಥೆಯವರ ಮೇಲೆ ಕ್ರಮ ಕೈಗೊಳ್ಳಲಾಗಿದೆ ಮತ್ತು ಪರಿಸರ ಇಲಾಖೆಯ ನಿಯಮಗಳನ್ನು ಉಲ್ಲಂಘಿಸಿದ ಎಷ್ಟು ಸರ್ಕಾರಿ ಸಂಸ್ಥೆಗಳ ಕ್ರಮ ಕೈಗೊಳ್ಳಲಾಗಿದೆ ?

ಇ) ಪರಿಸರ ಇಲಾಖೆಯ ಅಧಿಕಾರಿಗಳು ಬೆಳಗಾವಿ ಜಿಲ್ಲೆಯಲ್ಲಿ ಪರಿಸರ ಇಲಾಖೆಯ ನಿಯಮಗಳನ್ನು ಉಲ್ಲಂಘಿಸಿದ ಎಷ್ಟು ಜನರ ಮೇಲೆ ಕ್ರಮ ಕೈಗೊಂಡಿರುವರು ?

ಈ) ಬೆಳಗಾವಿ ಜಿಲ್ಲೆಯಲ್ಲಿ ಪರಿಸರ ಇಲಾಖೆಯ ಉಸ್ತುವಾರಿಯನ್ನು ಯಾರು ನೋಡಿಕೊಳ್ಳುತ್ತಿರುವರು ಹಾಗೂ ಎಷ್ಟು ಸಾರಿ ಪರಿಸರ ಇಲಾಖೆಯ ಸಭೆಯನ್ನು ಮಾಡಿರುವರು ?

ಶ್ರೀ ಎನ್. ಜಿ. ಹಾಲಪ್ಪ (ವಿಜ್ಞಾನ, ಯಂತ್ರಕಲಾ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು).—

ಅ) ಹೌದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕ್ರಮ ಕೈಗೊಂಡಿರುತ್ತದೆ.

ಆ) ೧೯೯೨–೯೩ ಹಾಗೂ ೧೯೯೩–೯೪ನೇ ಸಾಲಿನಲ್ಲಿ ೨೩ ಕಾರ್ಖಾನೆಗಳಿಗೆ ಮುಚ್ಚುವಿಕೆ ಆಜ್ಞೆ ನೀಡಲಾಗಿದೆ. ಇದರಲ್ಲಿ ೧೮ ಖಾಸಗಿ ಕೈಗಾರಿಕೆಗಳು ಹಾಗೂ ಐದು ಸಹಕಾರಿ ಕ್ಷೇತ್ರದ ಕೈಗಾರಿಕೆಗಳು ಸೇರಿವೆ.

ಇ) ಬೆಳಗಾವಿ ಜಿಲ್ಲೆಗಳಲ್ಲಿ ಎರಡು ಕೈಗಾರಿಕೆಗಳಿಗೆ ಮುಚ್ಚುವಿಕೆಗೆ ಆದೇಶಿಸಲಾಗಿದೆ. ಆದಲ್ಲದೆ ಜಿಲ್ಲೆಯ ಹದಿನೈದು ಪುರಸಭೆ ಹಾಗೂ ಒಂದು ನಗರ ಸಭೆಗೆ ಕಾರಣ ಕೇಳುವ ನೋಟೀಸ್‌ನ್ನು ನೀಡಲಾಗಿದೆ.

ಈ) ಉಪ ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಧಾರವಾಡ ಇವರ ಬೆಳಗಾವಿ ಜಿಲ್ಲೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುವರು ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಜಿಲ್ಲಾ ಪರಿಸರ ಸಂರಕ್ಷಣಾ ಸಮಿತಿ ರಚನೆಯಾಗಿರುವುದಿಲ್ಲವಾದ್ದರಿಂದ ಅಲ್ಲಿ ಯಾವುದೇ ಸಭೆಯನ್ನು ನಡೆಸಿರುವುದಿಲ್ಲ.